**MVC No.1499/2024 PW-1**

**ದಿನಾಂಕ: 13.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ

ಮೃತ ನನ್ನ ಪತಿ. 1 ನೇ ಎದುರುದಾರ ನನ್ನ ಚಿಕ್ಕಮ್ಮನ ಅಳಿಯ. 1 ನೇ ಎದುರುದಾರನಿಗೆ ಮೋಟಾರ್ ಸೈಕಲ ಚಲಾಯಿಸಲು ಯಾವುದೇ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂದು ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ಅಪಘಾತ ನಾನು ಕಣ್ಣಾರೆ ನೋಡಿದ್ದೇನೆ. 1 ನೇ ಎದುರುದಾರ ಮೋಟಾರ್ ಸೈಕಲನ್ನು ಜೋರಾಗಿ ಚಲಾಯಿಸಿ ತೆಗ್ಗಿನಲ್ಲಿ ಬಿದ್ದು ಅಪಘಾತ ಮಾಡಿದ್ದಾನೆ ಎಂದರೆ ನಿಜ. ಆಗ ಮೋಟಾರ್ ಸೈಕಲನಲ್ಲಿ ಒಬ್ಬನು ಚಾಲಕ ಇಬ್ಬರು ಹಿಂಬದಿ ಸವಾರರು ಇದ್ದರು ಎಂದರೆ ನಿಜ. ದ್ವಿಚಕ್ರ ವಾಹನ ಇಬ್ಬರು ಸವಾರರಿಗೆ ಮಾತ್ರ ಇದ್ದು ಆದರೆ ಅದರಲ್ಲಿ 3 ಜನ ಹೋಗಿದ್ದಲ್ಲಿ ಅಪಘಾತವಾಗುವ ಸಾಧ್ಯತೆ ಇರುತ್ತದೆ ಎಂದರೆ ನಿಜ.

3 ಜನರು ನಿಧಾನವಾಗಿ ಹೋಗಿದ್ದಲ್ಲಿ ಅಪಘಾತ ಆಗುತ್ತಿರಲಿಲ್ಲ ಎಂದರೆ ನಿಜ. ಆದರೆ 3 ಜನರು ನಿಧಾನವಾಗಿ ಹೋಗದೇ ಜೋರಾಗಿ ಹೋಗಿದ್ದಕ್ಕೆ ಅಪಘಾತ ಆಗಿದೆ ಎಂದರೆ ನಿಜ. ಪೋಲಿಸ್ ದೂರನ್ನು ಯಾರು ಕೊಟ್ಟಿದ್ದಾರೆ ಗೊತ್ತಿಲ್ಲ. ಅದತಿಮ ವರದಿಯಲ್ಲಿ ಸಂಬಂಧಪಟ್ಟ ಪೋಲಿಸರು ಸವಾರನ ವಿರುದ್ಧ ಚಾಲನಾ ಪತ್ರ ಇಲ್ಲದೇ ಚಾಲನೆ ಮಾಡಿದ್ದಾರೆ ಅಂತಾ ಕಲಂ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಗಂಡ ಅಪಘಾತದ ಪೂರ್ವದಲ್ಲಿ ತರಕಾರಿ ವ್ಯಾಪಾರ ಮತ್ತು ವ್ಯವಸಾಯ ಮಾಡಿ ಪ್ರತಿದಿನ 1000 ರೂಪಾಯಿ ಗಳಿಸುತ್ತಿದ್ದ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಆ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ವ್ಯವಸಾಯ ಮಾಡುತ್ತಿದ್ದ ಎಂಬ ಬಾಬತ್ತು ಆರ್ ಟಿ ಸಿ ಪಹಣಿ ಕೊಟ್ಟಿಲ್ಲ. ಅಪಘಾತದ ದಿನ ನನ್ನ ಮೃತ ಪತಿಗೆ 40 ವರ್ಷ ವಯಸ್ಸಾಗಿತ್ತು ಅಂತಾ ದಾಖಲೆ ಕೊಟ್ಟಿಲ್ಲ. ಆತನಿಗೆ ಅಂದು 48 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ನನ್ನ ಮೃತ ಪತಿಯ ಶವ ಸಾಗಾಟ ಮತ್ತು ಸಂಸ್ಕಾರಕ್ಕೆ ಅಂತಾ ಒಟ್ಟಾರೆ 1 ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5 ನೇ ಅರ್ಜಿದಾರಳು ಏನು ಕೆಲಸ ಮಾಡುವುದಿಲ್ಲ ನಾನು ಕನ್ನಡಿ ವ್ಯಾಪಾರ ಮಾಡುತ್ತೇನೆ ಆದರೆ ಅದು ಯಾವುದಕ್ಕೂ ಸಾಲುವುದಿಲ್ಲ. 2 ರಿಂದ 4 ನೇ ಅರ್ಜಿದಾರರ ವಯಸ್ಸಿನ ದಾಖಲೆ ಕೊಟ್ಟಿದ್ದೇನೆ. ಆಧಾರಕಾರ್ಡಗಳನ್ನು ಹೊರತುಪಡಿಸಿ ವಯಸ್ಸಿನ ಬಗ್ಗೆ ಬೇರೆ ಯಾವುದೇ ದಾಖಲೆ ಕೊಟ್ಟಿಲ್ಲ. ಮೃತ ಮೌಲಾಸಾಬ ಇತನಿಗೆ ನಾನು ಮತ್ತು ಉಳಿದ ಅರ್ಜಿದಾರರು ಮಾತ್ರ ವಾರಸುದಾರರು ಅಂತಾ ತೋರಿಸಲು ವಾರಸಾ ಪ್ರಮಾಣಪತ್ರ ಕೊಟ್ಟಿಲ್ಲ. ನನ್ನ ಮೃತ ಪತಿಯ

ಚಿಕಿತ್ಸೆಗೆ ಅಂತಾ 2 ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶಿವಮೊಗ್ಗದ ಆನವಟ್ಟಿಯಲ್ಲಿ ಅಪಘಾತ ಆಗಿದ್ದು ಆದರೆ ನಾನು ಮುಂಡಗೋಡದ ಹುನಗುಂದ ಗ್ರಾಮದಲ್ಲಿ ವಾಸ ಮಾಡುತ್ತೇನೆ. ಹಾನಗಲ್ ನಲ್ಲಿ ನನ್ನ ಸಂಬಂಧಿಕರ ಮನೆಯಲ್ಲಿ ವಾಸವಾಗಿದ್ದೆ. ನಾನು ಹಾನಗಲ್ ನಲ್ಲಿ ವಾಸ ಇದ್ದೇನೆ ಅಂತಾ ತೋರಿಸಲು ಯಾವುದೇ ದಾಖಲೆ ಇಲ್ಲ. ಅಪಘಾತ ಸಂಪೂರ್ಣವಾಗಿ ಚಾಲಕನ ತಪ್ಪಿನಿಂದ ಆಗಿದ್ದರಿಂದ ಹಾಗೂ ಚಾಲಕನ ಚಾಲನಾ ಪತ್ರ ಇಲ್ಲದ್ದರಿಂದ ನಾನು ಕೇಳಿದ ಪರಿಹಾರಕ್ಕೆ 2 ನೇ ಎದುರುದಾರ ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರ ಏಕಪಕ್ಷೀಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ ಎಂ ಎಫ್ ಸಿ ಹಾನಗಲ್

( ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ಎದುರುದಾರರು ಹಾಗೂ ಅವರ ವಕೀಲರನ್ನು ಕರೆಯಲಾಯಿತು, ಗೈರು ಹಾಜರಿ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

2 ನೇ ಎದುರುದಾರರು ಏಕಪಕ್ಷೀಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

(ಅರ್ಜಿದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಗಿದೆ)

(ಎದುರುದಾರರು ಮತ್ತು ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರು, ತಕರಾರು ಸಲ್ಲಿಸಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)